DFA 2692688

# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | :457 |
| ಸದಸ್ಯರ ಹೆಸರು | :ಶ್ರೀ ಡಿ.ಎಸ್. ಅರುಣ್ |
| ಉತ್ತರಿಸುವ ಸಚಿವರು | :ಸಾರಿಗೆ ಸಚಿವರು |
| ಉತ್ತರಿಸುವ ದಿನಾಂಕ | :19.08.2026 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|

**ಅ.** ಪ್ರಶ್ನೆ: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (KSRTC) ಯ ಪ್ರಸ್ತುತ ಹಣಕಾಸಿನ ಸ್ಥಿತಿಗತಿ ಏನು; ಕಳೆದ ಮೂರು ವರ್ಷಗಳಲ್ಲಿ ಸಂಸ್ಥೆಯ ಆದಾಯ, ವೆಚ್ಚ ಹಾಗೂ ಲಾಭ-ನಷ್ಟದ ವಿವರಗಳನ್ನು ವರ್ಷವಾರು ನೀಡುವುದು;

ಉತ್ತರ: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಕಳೆದ ಮೂರು ವರ್ಷಗಳ ಆದಾಯ, ವೆಚ್ಚ ಮತ್ತು ನಷ್ಟದ ವಿವರಗಳು ಈ ಕೆಳಕಂಡಂತಿದೆ:

**(ರೂ. ಕೋಟಿಗಳಲ್ಲಿ)**

| ವರ್ಷ | ಒಟ್ಟು ಆದಾಯ | ಒಟ್ಟು ವೆಚ್ಚ | ನಷ್ಟ |
|---|---|---|---|
| 2023-24 | 4544.41 | 4839.84 | 295.43 |
| 2024-25 (Un-Audited) | 5406.38 | 5488.21 | 81.83 |
| 2025-26 (Provisional) | 5697.27 | 6171.07 | 473.80 |

**ಆ.** ಪ್ರಶ್ನೆ: ಪ್ರಸ್ತುತ KSRTC ಸಂಸ್ಥೆಯ ಮೇಲಿರುವ ಒಟ್ಟು ಸಾಲದ ಮೊತ್ತ ಎಷ್ಟು; ಕಳೆದ ಮೂರು ವರ್ಷಗಳಲ್ಲಿ ಸಂಸ್ಥೆಯ ಸಾಲದ ಪ್ರಮಾಣ ಎಷ್ಟು ಹೆಚ್ಚಾಗಿದೆ ಅಥವಾ ಕಡಿಮೆಯಾಗಿದೆ ಹಾಗೂ ಸಾಲದ ಬಡ್ಡಿ ಪಾವತಿಗಾಗಿ ವರ್ಷಕ್ಕೆ ಎಷ್ಟು ಮೊತ್ತವನ್ನು ಭರಿಸಲಾಗುತ್ತಿದೆ;

ಉತ್ತರ: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು 2023-24ನೇ ಸಾಲಿನಿಂದ ಪಡೆದ ಸಾಲದ ವಿವರಗಳು ಈ ಕೆಳಕಂಡಂತಿದೆ:-

**(ರೂ. ಕೋಟಿಗಳಲ್ಲಿ)**

| ವರ್ಷ | ಸಾಲದ ಆರಂಭಿಕ ಶಿಲ್ಕು | ಸಾಲ ಪಡೆದ ಮೊತ್ತ | ಮರು ಪಾವತಿಮೊತ್ತ | ಸಾಲದ ಅಂತಿಮ ಶಿಲ್ಕು | ಬಡ್ಡಿ ಮೊತ್ತ |
|---|---|---|---|---|---|
| 2023-24 | 177.38 | 75.74 | 73.96 | 179.16 | 14.45 |
| 2024-25 | 179.16 | 144.14 | 67.12 | 256.12 | 23.58 |
| 2025-26 | 256.15 | 623.80* | 117.69 | 762.26 | 62.16 |
| 2026-27 (ಜುಲೈ-26ರ ಮಾಹೆಯ ವರೆಗೆ) | 762.26 | - | 52.01 | 710.16 (ಜುಲೈ ಅಂತ್ಯದಲ್ಲಿದ್ದಂತೆ) | 21.21 |

* 2025-26ನೇ ಸಾಲಿನಲ್ಲಿ ಪಡೆದ ರೂ.623.80 ಕೋಟಿಗಳ ಸಾಲವು ಸರ್ಕಾರದ ಬೆಂಬಲಿತ ಸಾಲವಾಗಿದ್ದು, ಸದರಿ ಸಾಲದ ಮರುಪಾವತಿಗೆ ತಗಲುವ ಅಸಲು ಮತ್ತು ಬಡ್ಡಿ ಮೊತ್ತವನ್ನು ಸರ್ಕಾರವು ಆಯವ್ಯಯದಲ್ಲಿ ಹಂಚಿಕೆ ಮಾಡಿ ಬಿಡುಗಡೆಗೊಳಿಸುತ್ತಿದೆ.

**ಇ.** KSRTC ಸಂಸ್ಥೆಯ ನಿರಂತರ ಹಣಕಾಸಿನ ಒತ್ತಡಕ್ಕೆ ಪ್ರಮುಖ ಕಾರಣಗಳೇನು: ಸಂಸ್ಥೆಯ ಕಾರ್ಯಾಚರಣಾ ವೆಚ್ಚ, ಇಂಧನ ವೆಚ್ಚ, ಸಿಬ್ಬಂದಿ ವೇತನ-ಸೌಲಭ್ಯಗಳು ಹಾಗೂ ಇತರ ವೆಚ್ಚಗಳಿಗೆ ಹೋಲಿಸಿದರೆ ಸಂಸ್ಥೆಯ ಆದಾಯದಲ್ಲಿ ಉಂಟಾಗುತ್ತಿರುವ ಕೊರತೆಯನ್ನು ಸರಿದೂಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು:

2023-24ನೇ ಸಾಲಿನಿಂದ ಪಡೆದ ಸಾಲದ ವಿವರಗಳು ಈ ಕೆಳಕಂಡಂತಿದೆ:-

| ವಿವರ | 2023-24 | 2024-25 (Un-Audited) | 2025-26 (Provisional) |
|---|---|---|---|
| **ಒಟ್ಟು ಆದಾಯ ವೆಚ್ಚ** | **4544.41** | **5406.38** | **5697.27** |
| ಸಿಬ್ಬಂದಿ ವೆಚ್ಚ | 2128.00 | 2236.17 | 2749.90 |
| ಇಂಧನ ವೆಚ್ಚ | 1826.46 | 1958.72 | 2082.52 |
| ಸಾಮಗ್ರಿಗಳ ವೆಚ್ಚ | 229.75 | 252.39 | 266.61 |
| ಇತರ ವೆಚ್ಚ | 655.63 | 1040.93 | 1072.04 |
| **ಒಟ್ಟು ವೆಚ್ಚ** | **4839.84** | **5488.21** | **6171.07** |
| **ನಷ್ಟ** | **295.43** | **81.83** | **473.80** |

**ಈ.** KSRTC ಸಂಸ್ಥೆಯ ಮೇಲಿರುವ ಸಾಲದ ಹೊರೆ ಹಾಗೂ ಹಣಕಾಸಿನ ಕೊರತೆಯನ್ನು ಕಡಿಮೆ ಮಾಡಿ ಸಂಸ್ಥೆಯನ್ನು ಆರ್ಥಿಕವಾಗಿ ಸದೃಢಗೊಳಿಸಲು ಸರ್ಕಾರವು ರೂಪಿಸಿರುವ ವಿಶೇಷ ಕಾರ್ಯಯೋಜನೆ ಏನು; ಸಾಲ ಮರುಪಾವತಿ, ಬಡ್ಡಿವೆಚ್ಚ ಕಡಿತ ಹಾಗೂ ಆದಾಯ ಹೆಚ್ಚಳಕ್ಕಾಗಿ ಕೈಗೊಂಡಿರುವ ಕ್ರಮಗಳ ಪ್ರಸ್ತುತ ಪ್ರಗತಿ ಯಾವ ಹಂತದಲ್ಲಿದೆ? (ಮಾಹಿತಿ ಒದಗಿಸುವುದು)

ನಿಗಮದ ಆರ್ಥಿಕ ಪರಿಸ್ಥಿತಿಯನ್ನು ಸಮರ್ಥವಾಗಿ ನಿಭಾಯಿಸುವ ನಿಟ್ಟಿನಲ್ಲಿ ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಂಡಿದೆ.

1. ವಿದ್ಯಾರ್ಥಿ ರಿಯಾಯಿತಿ ಪಾಸ್ ಹಾಗೂ ಇತರೆ ವರ್ಗದ ರಿಯಾಯಿತಿ ಪಾಸುಗಳ ವೆಚ್ಚವನ್ನು ಮರುಪಾವತಿ ಮಾಡುವುದರ ಜೊತೆಗೆ, ನಿಗಮದಲ್ಲಿ ಕ್ರೋಢೀಕೃತವಾದ ಹಿಂಬಾಕಿ ಪಾವತಿಸಲು ನಿಗಮಕ್ಕೆ 2021-22ನೇ ಸಾಲಿನಲ್ಲಿ ರೂ.200.00 ಕೋಟಿ, 2022-23ನೇ ಸಾಲಿನಲ್ಲಿ ರೂ.555.00 ಕೋಟಿ ಹಾಗೂ 2025-26ನೇ ಸಾಲಿನಲ್ಲಿ ರೂ.20.00 ಕೋಟಿಗಳ ವಿಶೇಷ ಅನುದಾನವನ್ನು ಬಿಡುಗಡೆಗೊಳಿಸಿದೆ.
2. ಪ್ರಯಾಣಿಕರಿಗೆ ಸಾರಿಗೆ ಮೂಲಭೂತ ಸೌಲಭ್ಯವನ್ನು ಕಲ್ಪಿಸಲು ಕ.ರಾ.ರ.ಸಾ.ನಿಗಮಕ್ಕೆ 2023-24ನೇ ಸಾಲಿನಲ್ಲಿ ರೂ.40.00 ಕೋಟಿಗಳನ್ನು, 2024-25ನೇ ಸಾಲಿನಲ್ಲಿ ರೂ.33.14 ಕೋಟಿಗಳನ್ನು ಹಾಗೂ 2025-26ನೇ ಸಾಲಿನಲ್ಲಿ ರೂ.15.00 ಕೋಟಿಗಳನ್ನು ಬಿಡುಗಡೆಗೊಳಿಸಿರುತ್ತದೆ ಹಾಗೂ ಹೊಸ ವಾಹನ ಖರೀದಿಗಾಗಿ 2023-24ನೇ ಸಾಲಿನಲ್ಲಿ ರೂ.100.00 ಕೋಟಿಗಳನ್ನು ಹಾಗೂ 2025-26ನೇ ಸಾಲಿನಲ್ಲಿ ರೂ.190.00 ಕೋಟಿಗಳ ವಿಶೇಷ ಬಂಡವಾಳ ಅನುದಾನವನ್ನು ಬಿಡುಗಡೆಗೊಳಿಸಿರುತ್ತದೆ.
3. ಸಾರಿಗೆ ನಿಗಮಗಳ ಬಾಕಿ ಹೊಣೆಗಾರಿಕೆಗಳಾದ ಭವಿಷ್ಯ ನಿಧಿ ಹಾಗೂ ಇಂಧನದ ಬಾಕಿ ಮೊತ್ತ ಪಾವತಿಸಲು ಕ.ರಾ.ರ.ಸಾ.ನಿಗಮಕ್ಕೆ ರೂ.623.80 ಕೋಟಿಗಳ ಸಾಲವನ್ನು ಸರ್ಕಾರದ ಖಾತರಿ/ಗ್ಯಾರಂಟಿಯೊಂದಿಗೆ ಹಣಕಾಸು ಸಂಸ್ಥೆಗಳಿಂದ ಪಡೆಯಲು ಅನುಮೋದನೆ ನೀಡಿ, ಸದರಿ ಸಾಲದ ಅಸಲು ಮತ್ತು ಬಡ್ಡಿ ಮರುಪಾವತಿಗಾಗಿ 2025-26ನೇ ಸಾಲಿನಲ್ಲಿ ರೂ.94.54 ಕೋಟಿಗಳನ್ನು ಬಿಡುಗಡೆ ಮಾಡಿದ್ದು, 2026-27ನೇ ಸಾಲಿನ ಆಯವ್ಯಯದಲ್ಲಿ ರೂ.182.87 ಕೋಟಿಗಳನ್ನು ಪ್ರಾವದಾನ ಮಾ

ಡಲಾಗಿದ್ದು. ಜುಲೈ-2026ರವರೆಗೆ ರೂ.34.81 ಕೋಟಿಗಳನ್ನು ಬಿಡು ಗಡೆಗೊಳಿಸಿದೆ.

4. ನಿಗಮದ ನಗದು ಕೊರತೆಯನ್ನು ನಿಭಾಯಿಸಲು 2022-23ನೇ ಸಾಲಿನಲ್ಲಿ ನಿಗಮವು ಪಾವತಿಸಬೇಕಾದ ಮೋಟಾರು ವಾಹನ ತೆರಿಗೆ ರೂ.193.61 ಕೋಟಿಗಳನ್ನು ನಿಗಮದ ಹಣಕಾಸು ಪರಿಸ್ಥಿತಿ ಉತ್ತಮಗೊಂಡ ನಂತರ (Retention of M.V.Tax payable) ಪಾವತಿ ಮಾಡಲು ಮುಂದೂಡಿ ಆದೇಶಿಸಿದೆ. 2023-24ನೇ ಸಾಲಿನಲ್ಲಿ ನಿಗಮವು ಸರ್ಕಾರಕ್ಕೆ ಪಾವತಿ ಮಾಡಬೇಕಾದ ಮೋಟಾರು ವಾಹನ ತೆರಿಗೆ ರೂ.243.52 ಕೋಟಿಗಳ ಪಾವತಿಯಿಂದ ವಿನಾಯಿತಿಯನ್ನು ನೀಡಿರುತ್ತದೆ ಹಾಗೂ ನಿಗಮವು ಸರ್ಕಾರಕ್ಕೆ ಪಾವತಿಸಬೇಕಾದ ಮೋಟಾರು ವಾಹನ ತೆರಿಗೆ ಮೊತ್ತವನ್ನು ಪುಸ್ತಕ ಹೊಂದಾಣಿಕೆ ಮೂಲಕ ಪಾವತಿಸಲು 2024-25ನೇ ಸಾಲಿನಲ್ಲಿ ರೂ.282.75 ಕೋಟಿಗಳನ್ನು ಮತ್ತು 2025-26ನೇ ಸಾಲಿನಲ್ಲಿ ರೂ.272.11 ಕೋಟಿಗಳ ಅನುದಾನವನ್ನು ಬಿಡುಗಡೆಮಾಡಿದೆ.

5. ಸರ್ಕಾರವು ಆದೇಶ ಸಂಖ್ಯೆ:ಟಿಡಿ 12 ಟಿಸಿಬಿ 2023. ದಿನಾಂಕ:18.02.2026ರನ್ವಯ ನಾಲ್ಕು ನಿಗಮಗಳಿಗೆ ದಿನಾಂಕ:01.01.2021 ರಿಂದ 28.02.2023ರವರೆಗೆ ಒಟ್ಟು 26 ತಿಂಗಳ ವೇತನ ಹಿಂಬಾಕಿ ಮೊತ್ತ ರೂ.1271.92 ಕೋಟಿಗಳನ್ನು ಪಾವತಿಸಲು ಅನುಮೋದನೆ ನೀಡಿ ಆದೇಶಿಸಿದ್ದು ಅದರಂತೆ. ಸರ್ಕಾರವು 2026-27ನೇ ಸಾಲಿನ ಆಯವ್ಯಯದಲ್ಲಿ ನಾಲ್ಕು ನಿಗಮಗಳಿಗೆ ಒಟ್ಟು ರೂ.900.00 ಕೋಟಿಗಳನ್ನು ಪ್ರವಾಧನ ಮಾಡಿ ಕರಾರಸಾ ನಿಗಮಕ್ಕೆ ಸರ್ಕಾರಿ ಆದೇಶ ಸಂಖ್ಯೆ:ಟಿಡಿ 12 ಟಿಸಿಬಿ 2023. ದಿನಾಂಕ:29.04.2026ರನ್ವಯ ರೂ.143.85 ಕೋಟಿಗಳನ್ನು ಹಾಗೂ ಆದೇಶ ಸಂಖ್ಯೆ:ಟಿಡಿ 12 ಟಿಸಿಬಿ 2023. ದಿನಾಂಕ:14.08.2026ರನ್ವಯ ರೂ.54.35 ಕೋಟಿಗಳನ್ನು ಬಿಡುಗಡೆಗೊಳಿಸಿರುತ್ತದೆ.

6. ಶಕ್ತಿ ಯೋಜನೆ ಜಾರಿಯಾದ ದಿನಾಂಕ:11.06.2023 ರಿಂದ ಸಾರಿಗೆ ನಿಗಮಗಳಲ್ಲಿ ಪ್ರಯಾಣಿಸಿದ ಮಹಿಳಾ ಪ್ರಯಾಣಿಕರು ಟಿಕೆಟ್ ವೆಚ್ಚದ ಆಧಾರದಲ್ಲಿ ಮರು ಪಾವತಿಯನ್ನು ಪ್ರತಿ ಮಾಹೆಯಾನ ಮುಂಗಡವಾಗಿ ಬಿಡುಗಡೆ ಮಾಡಲಾಗುತ್ತಿದ್ದು. ಅದರಂತೆ ಜುಲೈ-2026ರವರಿಗೆ ಅನುದಾನವನ್ನು ಬಿಡುಗಡೆಗೊಳಿಸಿದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವನ್ನು ಲಾಭದಾಯಕವಾಗಿ ಪರಿವರ್ತಿಸಲು ಹಾಗೂ ಆದಾಯ ಹೆಚ್ಚಳಕ್ಕಾಗಿ ಕೈಗೊಂಡ ಕ್ರಮಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಸಂಖ್ಯೆ: ಟಿಡಿ 222 ಟಿಸಿಕ್ಯೂ 2026

(ಬಿ.ಎಸ್. ಸುರೇಶ)
ಸಾರಿಗೆ ಸಚಿವರು

ಅನುಬಂಧ-1

## ಕ.ರಾ.ರ.ಸಾ.ನಿಗಮವನ್ನು ಲಾಭದಾಯಕವಾಗಿ ಪರಿವರ್ತಿಸಲು ಕೈಗೊಂಡಿರುವ ಕ್ರಮಗಳ/ಯೋಜನೆಗಳ ವಿವರಗಳು

- ಕ.ರಾ.ರ.ಸಾ.ನಿಗಮದ ವತಿಯಿಂದ ಸಾಮಾನ್ಯ, ನಗರ ಮತ್ತು ವೇಗದೂತ ಸಾರಿಗೆಗಳಲ್ಲದೆ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಅಶ್ವಮೇಧ ಕ್ಲಾಸಿಕ್, ರಾಜಹಂಸ, ಐರಾವತ, ಎ.ಸಿಸ್ಲೀಪರ್, ನಾನ್ ಎಸಿ ಸ್ಲೀಪರ್, ಪಲ್ಲಕ್ಕಿ, ಐರಾವತ ಕ್ಲಬ್ ಕ್ಲಾಸ್, ಫ್ಲೈ-ಬಸ್, ಅಂಬಾರಿ ಡ್ರೀಮ್ ಕ್ಲಾಸ್, ಅಂಬಾರಿ ಉತ್ಸವ ಮುಂತಾದ ಪ್ರತಿಷ್ಠಿತ ಸಾರಿಗೆಗಳನ್ನು ಕಾರ್ಯಾಚರಿಸಿ ರಾಜ್ಯದ ಹಾಗೂ ನೆರೆ ರಾಜ್ಯದ ಪ್ರಮುಖ ಸ್ಥಳಗಳಿಗೆ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ.
- ಕರ್ನಾಟಕ ಮತ್ತು ನೆರೆ ರಾಜ್ಯಗಳಾದ ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ, ಗುಜರಾತ್, ತಮಿಳುನಾಡು ಮತ್ತು ಪುದುಚೆರಿ ರಾಜ್ಯಗಳ ಜೊತೆಗೆ ನೂತನ ಪೂರಕ ಅಂತರರಾಜ್ಯ ಸಾರಿಗೆ ಒಪ್ಪಂದಗಳನ್ನು ಮಾಡಿಕೊಳ್ಳುವ ಪ್ರಸ್ತಾವನೆ ಇದ್ದು ಒಪ್ಪಂದಗಳ ಪ್ರಕ್ರಿಯೆಯು ಜಾರಿಯಲ್ಲಿರುತ್ತದೆ. ಈ ರಾಜ್ಯಗಳ ಜೊತೆಗೆ ಒಪಂಪ್ಪದವಾದ ನಂತರ ಕರ್ನಾಟಕದಿಂದ ಹೆಚ್ಚುವರಿ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲು ಹಾಗೂ ಹೆಚ್ಚು ಸಾರಿಗೆ ಆದಾಯ ಗಳಿಸಲು ಅವಕಾಶವಾಗುವುದು.
- ಕ.ರಾ.ರ.ಸಾ ನಿಗಮವು ಟಿಕೆಟ್ ವಿತರಣೆಯಲ್ಲಿ ಸರಳತೆ ಹಾಗೂ ಪಾರದರ್ಶಕತೆ ತರುವ ನಿಟ್ಟಿನಲ್ಲಿ ಇ.ಟಿ.ಎಂ (Electronic Ticketing Machine) ಜಾರಿಗೆ ತಂದಿರುತ್ತದೆ. ಡೈನಾಮಿಕ್ ಕ್ಯೂಆರ್ ಕೋಡ್ ಮೂಲಕ ಯು.ಪಿ.ಐ. ಮುಖಾಂತರ ಪಾವತಿಸಿ ಟಿಕೆಟ್ ಪಡೆಯು ವವ್ಯವಸ್ಥೆ ಜಾರಿಗೆ ತಂದಿರುತ್ತದೆ.
- ಸಾರ್ವಜನಿಕ ಪ್ರಯಾಣಿಕರಿಗೆ ಮುಂಗಡವಾಗಿ ಆಸನಗಳನ್ನು ಕಾಯ್ದಿರಿಸುವ ಅನುಕೂಲಕ್ಕಾಗಿ ನಿಗಮವು ಅವತಾರ್ (ಯಾವುದೇ ಸ್ಥಳದಿಂದ ಯಾವುದೇ ಸಮಯದಲ್ಲಿ ಟಿಕೆಟು ಕಾಯ್ದಿರಿಸುವಿಕೆ) ಗಣಕೀಕೃತ ಮುಂಗಡ ಬುಕಿಂಗ್ ಯೋಜನೆ ಜಾರಿಗೊಳಿಸಿದ್ದು, ರಾಜ್ಯದ ಹಾಗೂ ಹೊರ ರಾಜ್ಯಗಳ ಪ್ರಮುಖ ಸ್ಥಳಗಳಲ್ಲಿ ನಿಗಮದ ಕೌಂಟರುಗಳು/ಖಾಸಗಿ ಬುಕಿಂಗ್ ಏಜೆಂಟರುಗಳ ಮೂಲಕ ಮುಂಗಡ ಟಿಕೆಟ್ ಬುಕಿಂಗ್ ವಸ್ಥೆಯನ್ನು ಕಲ್ಪಿಸಲಾಗಿದೆ.
- ಕರಾರಸಾನಿಗಮದ ಸಾರಿಗೆಗಳಲ್ಲಿ ಮುಂಗಡ ಆಸನಗಳನ್ನು ಕಾಯ್ದಿರಿಸಲು ಜಿ.ಪಿಆರ್‌ಎ ಸೌಲಭ್ಯವುಳ್ಳ ಮೊಬೈಲ್ ದೂರವಾಣಿ ಮೂಲಕ ಮುಂಗಡ ಟಿಕೆಟು ಕಾಯ್ದಿರಿಸುವ ಎಂ-ಬುಕಿಂಗ್ ಮತ್ತು ಇ-ಬುಕಿಂಗ್ ವ್ಯವಸ್ಥೆ ಜಾರಿಗೊಳಿಸಿದೆ.
- ಸಾರ್ವಜನಿಕ ಪ್ರಯಾಣಿಕರು ನಿಲ್ದಾಣವಾರು ವಾಹನಗಳ ನಿರ್ಗಮನಗಳ ಮಾಹಿತಿ ಪಡೆಯಲು ಮೈಸೂರು ನಗರದ ನಗರ ಸಾರಿಗೆ ವಾಹನಗಳಲ್ಲಿ ಐ.ಟಿ.ಎಸ್ (ಇಂಟೆಲಿಜೆಂಟ್ ಟ್ರ್ಯಾನ್ಸ್‌ಪೋರ್ಟ್ ಸಿಸ್ಟಮ್) ವ್ಯವಸ್ಥೆಯನ್ನು ಅಳವಡಿಸಲಾಗಿದ್ದು, ಸದರಿ ವಾಹನಗಳಲ್ಲಿ ಸಾರ್ವಜನಿಕ ಪ್ರಯಾಣಿಕರಿಗೆ ನಿಲ್ದಾಣವಾರು ಘೋಷಣೆಯ ವ್ಯವಸ್ಥೆಯನ್ನು ಅಳವಡಿಸಲಾಗಿದೆ. (ಪ್ಯಾಸೆಂಜರ್ ಅನೌನ್ಸ್‌ಮೆಂಟ್ ಸಿಸ್ಟಮ್).
- ಚಾಲನಾ ಸಿಬ್ಬಂದಿಗಳ ಅನುಕೂಲಕ್ಕಾಗಿ ಎಲ್ಲಾ ಘಟಕಗಳಲ್ಲಿ ಗಣಕೀಕೃತ ಡ್ಯೂಟಿರೋಟಾ ಸಿಸ್ಟಮ್‌ನ್ನು ಅಳವಡಿಸಿ ಮಾರ್ಗ ನಿಯೋಜನೆಯಲ್ಲಿ ಪಾರದರ್ಶಕ ವ್ಯವಸ್ಥೆಯನ್ನು ಜಾರಿಗೆತರಲಾಗಿದೆ.
- ನಿಗಮದ ಘಟಕಗಳಲ್ಲಿನ ಚಾಲನಾ/ತಾಂತ್ರಿಕ ಸಿಬ್ಬಂದಿಯ ರಜೆ ಮಂಜೂರಾತಿಯಲ್ಲಿ ಪಾರದರ್ಶಕತೆ ತರಲು ರಜೆ ಪಡೆಯುವ ಸಿಬ್ಬಂದಿಗಳು ಮೊಬೈಲ್/ಗಣಕಯಂತ್ರಗಳ ಮೂಲಕ ರಜೆ ಪಡೆಯುವ ಗಣಕೀಕೃತ ರಜೆ ವ್ಯವಸ್ಥೆಯನ್ನು (Online Leave Management System)/HRM Sಅಳವಡಿಸಲಾಗಿದೆ.
- ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ನಿಗಮದ ಪ್ರಮುಖ 111 ಬಸ್ ನಿಲ್ದಾಣಗಳಲ್ಲಿ ವಾಹನಗಳ ಸಂಖ್ಯೆ, ನಿರ್ಗಮನದ ವೇಳೆ, ತಲುಪುವ ಸ್ಥಳ, ಮಾರ್ಗದ ಮಾಹಿತಿಯನ್ನು ಸಾರ್ವಜನಿಕ ಉದ್ಘೋಷಣಾ ವ್ಯವಸ್ಥೆಯ ಮುಖಾಂತರ ತಿಳಿಸಲಾಗುತ್ತಿದೆ.